ಓ.ಎಸ್ ನಂ. 21/2021

ಪಿ. ಡಬ್ಲ್ಯೂ: 1

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 21-11-2025 ರಂದು ಬೊಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀ ಕೆ ಆರ್ ಡಿ ನ್ಯಾಯವಾದಿರವರಿಂದಃ**

ಪ್ರತಿವಾದಿಯರು ತಮ್ಮ ಜಮೀನನ್ನು ಅಡಿಪಾಯ ಹಾಕುವ ಸಲುವಾಗಿ ಮೊದಲು ಅಗೆದಿದ್ದು, ಅದನ್ನು ದಾವಾ ಕೌಂಟರ ಕ್ಲೇಮನಲ್ಲಿರುವ ತಕರಾರು ಜಾಗದೊಳಗೆ ಮಣ್ಣು ಹಾಕಿಕೊಂಡು ಎತ್ತರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಪ್ರತಿವಾದಿಯರು ಏನು ಮಾಡುತ್ತಾರೆ ಎಂಬುದನ್ನು ನಮಗೆ ತಿಳಿಸಿದ್ದು ಇರುವುದಿಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ. ಕೌಂಟರ ಕ್ಲೇಮ ಆಸ್ತಿಗೆ ಮಣ್ಣನ್ನು ಹಾಕುವ ಸಲುವಾಗಿ ಕೆಲಸವನ್ನು ಪ್ರತಿವಾದಿಯರು ಮಾಡುತ್ತಿದ್ದು, ನಾವು ಅದನ್ನು ನಿಲ್ಲಿಸಿದ್ದರಿಂದ ಮಣ್ಣು ಹಾಕುವ ಕೆಲಸವನ್ನು ಸ್ಥಗಿತಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯನ್ನು ಈ ದಾವೆಯನ್ನು ಹೂಡುವ ಮೊದಲಾಗಲೀ ನಂತದಲ್ಲಾಗಲೀ ಸರ್ವೇ ಇಲಾಖೆಯ ಮೂಲಕ ಅಳತೆ ಮಾಡಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಆ ಪ್ರಸಂಗ ಉದ್ಭವಿಸುವುದಿಲ್ಲಾ , ಕಾರಣ ಈ ಹಿಂದಿನಿಂದಲೇ ನಮಗೆ ಸೇರಿದ ಆವರಣ ಗೋಡೆ ಅಲ್ಲಿ ಇದ್ದು ಅದಕ್ಕೆ ಯಾರೂ ತಕರಾರು ಮಾಡಿದ್ದು ಇಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ. ಆವರಣ ಗೋಡೆಯನ್ನು ನಿರ್ಮಾಣ ಮಾಡಲು ಹಾಗೂ ಪಂಪಸೆಟ್ ನ್ನು ಕಟ್ಟಲು ಸಂಬಂಧಪಟ್ಟ ಪಂಚಾಯತಿಯಿಂದ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪರವಾನಿಗೆ ಪಡೆದುಕೊಂಡ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲಾ ಎಂದರೆ ಸರಿ. ಸಾಕ್ಷಿ ಸ್ವತಃ ಸದರಿ ಆವರಣ ಗೋಡೆಯನ್ನು ಸುಮಾರು 45 ವರ್ಷಗಳ ಹಿಂದೆಯೇ ನಿರ್ಮಿಸಲಾಗಿರುತ್ತದೆಂದು ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ಲಿಖಿತ ರೂಪದಲ್ಲಿ ದಾಖಲೆಗಳು ಹಾಗೂ ನೋಡಿದ ಬಗ್ಗೆ ದಾಖಲೆಗಳು ಇರುವುದಿಲ್ಲಾ ಎಂದರೆ ಸಾಕ್ಷಿಯು ಲಿಖಿತ ರೂಪದಲ್ಲಿ ದಾಖಲೆ ಇರುವುದಿಲ್ಲಾ, ಆದರೆ ನೋಡಿದ ಬಗ್ಗೆ ಸಾಕ್ಷಿ ಇರುತ್ತದೆಂದು ಸಾಕ್ಷ್ಯ ನುಡಿಯುತ್ತಾರೆ.

ಪ್ರತಿವಾದಿಯರು ದಾವಾ ಆಸ್ತಿಗಳನ್ನು ಸರ್ವೇಯರ ಮೂಲಕ ಖಾಸಗಿ ಸರ್ವೇ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಅವರು ಸರ್ವೇ ಮಾಡುತ್ತಾ ಇರುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. ಹಾಗೆ ಖಾಸಗಿ ಸರ್ವೇ ಮಾಡುವ ಸಮಯದಲ್ಲಿ ಪ್ರತಿವಾದಿಯರಿಗೆ ಸೇರಿದ 12 ಆಣೆ ವಿಸ್ತೀರ್ಣದ ಜಮೀನನ್ನು

ನಾವು ಅತಿಕ್ರಮಣ ಮಾಡಿರುವ ಬಗ್ಗೆ ಅವರಿಗೆ ತಿಳಿದು ಬಂದಿರುತ್ತದೆಂದರೆ ಸರಿಯಲ್ಲ. ನಾವು ಮಾಡಿದ ಜಮೀನನ್ನು ಖುಲ್ಲಾ ಪಡಿಸುವಂತೆ ವಾದಿಯರು ಕೇಳಿಕೊಂಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಮ್ಮ ಆವರಣ ಗೋಡೆ ಇದ್ದು , ನಾವು ಅತಿಕ್ರಮಣ ಮಾಡಿರುವುದಿಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ನನ್ನ ತಾಯಿಯ ಮನೆಗೆ ಹೋಗಿದ್ದಾಗ ದಿನಾಂಕಃ 27.11.2021 ರಂದು ಪಕ್ಕದ ಮನೆಯವರಾದ ದಿನಕರ ಸುಕ್ರು ಸಾಳುಂಕೆ ಇವರು ಅಪಾರ್ಟಮೆಂಟ ಕಟ್ಟಿಸಿದ್ದು , ಸದರಿ ಅಪಾರ್ಟಮೆಂಟನ ಪಕ್ಕಕ್ಕೆ ಇದ್ದ ನಮ್ಮ ಆವರಣ ಗೋಡೆಯನ್ನು ತೆರವುಗೊಳಿಸಿರುತ್ತಾರೆ ಎಂದು ಪೋಲೀಸರಿಗೆ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಈ ಬಗ್ಗೆ ಸದರಿ ದೂರನ್ನು ತೋರಿಸಲಾಗಿ, ಸಾಕ್ಷಿ ಗುರುತಿಸಿದ್ದರಿಂದ ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ಸಾಕ್ಷಿ ಸ್ವತಃ ಪ್ರತಿವಾದಿಯರು ಬಲಾಢ್ಯರಾಗಿದ್ದು, ನಮ್ಮ ಆವರಣ ಗೋಡೆಯನ್ನು ಏಕಾಏಕಿ ತೆರವುಗೊಳಿಸಿರುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. ನಾನು ತಾಯಿ ಮನೆಗೆ ಹೋದ ದಿವಸನೇ ವಾಪಾಸು ನನ್ನ ಮನೆಗೆ ಬಂದಿರುತ್ತೇನೆ. ಸಾಕ್ಷಿ ಸ್ವತಃ ನಮ್ಮ ಆವರಣ ಗೋಡೆಯನ್ನು ಏಕಾಏಕಿ ಪ್ರತಿವಾದಿಯು ಕೆಡವಿದ್ದರಿಂದ ನಾವು ಕಟ್ಟಿಸಿದ ಆವರಣ ಗೋಡೆಯನ್ನು ಏಕೆ ಕೆಡವಿರುತ್ತೀರಿ ಎಂದು ಅವರಿಗೆ ಕೇಳಿರುತ್ತೇನೆ. ಅದೇ ದಿವಸ ಯಾಕೆ ದೂರು ನೀಡಿರಲಿಲ್ಲಾ ಎಂದರೆ ನಾನುಪೋಲೀಸ ಠಾಣೆಗೆ ಈ ಪ್ರಕರಣಕ್ಕೆಸಂಬಂಧಿಸಿದಂತೆ ಮೊದಲ ಬಾರಿಗೆ ಹೋಗಿದ್ದು , ಅಲ್ಲದೇ ನನ್ನ ಗಂಡ ಸಹ ಪಾರ್ಶ್ವವಾಯು ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಪ್ರತಿವಾದಿಯರು ಪದೇ ಪದೇ ಆವರಣಗೋಡೆಯನ್ನು ಮುರಿಯುತ್ತಿದ್ದರು ಎಂದು ಆಧರಿಸುತ್ತೇವೆ ಎಂದರೆ ಸರಿ. ದಿನಾಂಕಃ 03.01.2021 ರ ವರೆಗೆ ನಾನು ಪ್ರತಿವಾದಿಯರ ವಿರುದ್ಧ ಯಾವುದೇ ದೂರು ನೀಡಿರುವುದಿಲ್ಲಾ ಎಂದರೆ ಸರಿ.

ನಮ್ಮ ಸೇರಿದ ಆವರಣ ಗೋಡೆಯು ನಾನು ಆಧರಿಸುವಂತೆ ಯಾವತ್ತೂ ಅಸ್ತಿತ್ವದಲ್ಲಿಲ್ಲದಿರುವುದರಿಂದ ಆವರಣ ಗೋಡೆ ಕೆಡವುವ ಪ್ರಶ್ನೆ ಉದ್ಭವಿಸುವುದಿಲ್ಲಾ ಎಂದರೆ ಸರಿಯಲ್ಲ. ದಿನಾಂಕಃ 03.01.2021 ರಂದು ಪೋಲೀಸರಿಗೆ ದೂರನ್ನು ನೀಡಿದಾಗ ಆವರಣ ಗೋಡೆಯನ್ನು ನಿರ್ಮಾಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ನಾನು ದಿನಾಂಕಃ 03.01.2021 ರಂದು ನಾನು ಕಂಪೌಂಡ ಗೋಡೆಯನ್ನು ಪುನಃ ಕಟ್ಟಿಸಿರುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಸ್ವತಃ ಕೆಡವಿದ ಆವರಣ ಗೋಡೆಯನ್ನು ರಿಪೇರಿ ಮಾಡಿರುತ್ತೇನೆ ಎಂದು ಸಾಕ್ಷ್ಯ

ನುಡಿಯುತ್ತಾರೆ. ನಿಪಿ.5 ರಿಂದ 9 ಭಾವಚಿತ್ರದಲ್ಲಿ ನಮ್ಮ ಜಮೀನಿನ ಪೂರ್ವದ ಗಡಿ ಮತ್ತು ಪ್ರತಿವಾದಿ ಜಮೀನಿನ ಪಶ್ಚಿಮದ ಗಡಿ ಮಧ್ಯದಲ್ಲಿ ಕಂಪೌಂಡ ಗೋಡೆ ಇದ್ದದ್ದು ಕಾಣಿಸುವುದಿಲ್ಲಾ ಎಂದರೆ ಸಾಕ್ಷಿಯು ಪ್ರತಿವಾದಿಯರು ಆವರಣ ಗೋಡೆಯನ್ನು ಕೆಡವಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ದಿನಾಂಕಃ 03.01.2021ರ ಪೂರ್ವದಲ್ಲಿ ಕಟ್ಟಡ ಕಟ್ಟುವ ಚಿರೆಕಲ್ಲು ಇತ್ಯಾದಿಗಳನ್ನು ಸಂಗ್ರಹಿಸಿದ್ದು, ದಿನಾಂಕಃ 03.01.2021 ರಂದು ಆವರಣ ಗೋಡೆ ಮತ್ತು ಪಂಪಸೆಟ್ ನಿರ್ಮಾಣ ಮಾಡಿಕೊಂಡು ನಮ್ಮ ಕಬ್ಜಾ ವಹಿವಾಟು ತೋರಿಸಲು ಪ್ರಯತ್ನಪಟ್ಟಿರುತ್ತೇವೆಂದರೆ ಸರಿಯಲ್ಲ. ನಿಪಿ.8 ರಿಂದ 10 ರಲ್ಲಿ ಪ್ರತಿವಾದಿಯರು ಕೆಲಸವನ್ನು ನಿಲ್ಲಿಸಿದ್ದು ಗಡಿ ಗುರುತು ನಿರ್ಧರಿಸುವವರೆಗೆ ಬಿದಿರಿನಿಂದ ಕಟ್ಟಿದ ಬೇಲಿಗೆ ಹಸಿರು ಹೊದಿಕೆಯನ್ನು ಹಾಕಿ ಸರ್ವೇ ಆಗುವ ತನಕ ಮುಂದಿನ ಕೆಲಸವನ್ನು ತಡೆಹಿಡಿದಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಪ್ರತಿವಾದಿಯರು ಬಿಲ್ಡರ ಇದ್ದು, ಅವರೇ ಅದನ್ನು ಹಾಕಿರುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. ನಮಗೆ ಮತ್ತು ಪ್ರತಿವಾದಿಯರಿಗೆ ಪ್ರಕರಣವು ಸಿವಿಲ್ ಸ್ವರೂಪದ್ದಾಗಿದ್ದು, ನ್ಯಾಯಾಲಯವನ್ನು ಸಂಪರ್ಕಿಸುವಂತೆ ಪೋಲೀಸರು ತಿಳಿಸಿರುತ್ತಾರೆ ಎಂದರೆ ಸರಿ. ಎಡಿಎಲ್ ಆರ್ ನವರು ಅಳತೆ ಮಾಡಲು ದಾವಾ ಆಸ್ತಿಗೆ ಬರುವ ಪೂರ್ವದಲ್ಲಿ ನೋಟೀಸು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಕಮೀಷನರ ದಾವಾ ಆಸ್ತಿಗೆ ಬಂದಿರುವುದಿಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ. ನ್ಯಾಯಾಲಯದಿಂದ ಕೋರ್ಟ ಕಮೀಷನರ ದಿನಾಂಕಃ 27.11.2023 ರಂದು ಸ್ಥಳಕ್ಕೆ ಕಮೀಷನ ಕಾರ್ಯ ಮಾಡಲು ಬರುತ್ತೇನೆಂದು ನೋಟೀಸ ಜಾರಿ ಮಾಡಿದ್ದರೆಂದರೆ ಸರಿ. ಸದರಿ ನೋಟೀಸಿಗೆ ನಾನು ಕಮೀಷನರ್ ಗೆ ಹಾಗೂ ಎಡಿಎಲ್ ಆರ್ ರವರಿಗೆ ದಿನಾಂಕಃ 07.12.2023 ಅಥವಾ 08.12.2023 ರಂದು ಸದರಿ ಸರ್ವೇ ಕೆಲಸ ಮಾಡಬೇಕೆಂದು ಪತ್ರ ಬರೆದಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಈ ಬಗ್ಗೆ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ.2 ಎಂದು ಗುರುತಿಸಲಾಯಿತು. ದಿನಾಂಕಃ 07.12.2023 ರಂದು ಕೋರ್ಟ ಕಮೀಷನರ ಅವರು ದಾವಾ ಆಸ್ತಿಗೆ ಕಮೀಷನ ಕೆಲಸಕ್ಕೆ ಬರುತ್ತೇವೆಂದು ನೋಟೀಸು ನೀಡಿರುತ್ತಾರೆ ಎಂದರೆ ಸರಿ. ಆ ದಿವಸ ಕೋರ್ಟ ಕಮೀಷನರ ಬಂದು ಪಂಚನಾಮೆ ತಯಾರಿಸಿರುತ್ತಾರೆ ಎಂದರೆ ಸಾಕ್ಷಿಯು ಕೋರ್ಟ ಕಮೀಷನರ ಬಂದಿರುವುದಿಲ್ಲಾ , ಒಬ್ಬರು ಸರ್ವೇಯರ ಬಂದಿರುತ್ತಾರೆಂದು ಸಾಕ್ಷ ನುಡಿಯುತ್ತಾರೆ. ಪಂಚನಾಮೆಯನ್ನು ಸಾಕ್ಷಿ ನೋಡಿ

ಗುರುತಿಸಿದ್ದರಿಂದ ಅದನ್ನು ನಿಡಿ.3 ಎಂದು ಗುರುತಿಸಲಾಯಿತು. ಎಡಿ ಎಲ್ ಆರ್ ಸ್ವತಃ ಕಮೀಷನ ಕಾರ್ಯಕ್ಕೆ ಬಂದಿದ್ದರೂ ಸಹಿತ ಬಂದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಕೋರ್ಟ ಕಮೀಷನರ ವರದಿಯಲ್ಲಿ ನಾನು ಮತ್ತು ನನ್ನ ಗಂಡ 10 ಆಣೆ ವಿಸ್ತೀರ್ಣದ ಜಮೀನನ್ನು ನಾವು ಅತಿಕ್ರಮಣ ಮಾಡಿರುತೆತೇವೆಂದು ವರದಿ ನೀಡಿರುತ್ತಾರೆಂದರೆ ಸರಿಯಲ್ಲ. ಈ ರೀತಿ 10 ಅಡಿ ವಿಸ್ತೀರ್ಣದ ಜಮೀನನ್ನು ಅತಿಕ್ರಮಣ ಮಾಡಿದ್ದರೂ ಸಹಿತ ಮಾಡಿಲ್ಲಾ ಎಂದುಸಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಪ್ರತಿವಾದಿಗೆ ಸೇರಿದ ಕೌಂಟರ ಕ್ಲೆಲಮ ಆಸ್ತಿಯ 10 ಆಣೆ ವಿಸ್ತಿರ್ಣದ ಕ್ಷೇತ್ರವನ್ನು ಅತಿಕ್ರಮಣ ಮಾಡಿದ್ದು , ಅದರಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಪ್ರತಿವಾದಿಯರ ಜಮೀನಿನ ಗಡಿಗುರುತು ಹಾಗೂ ರಾಷ್ಟ್ರೀಯ ಹೆದ್ದಾರಿಗೆ ಸ್ವಾಧೀನವಾದ ಜಮೀನಿನ ಕ್ಷೇತ್ರವನ್ನು ತೋರಿಸದೇ ಇದ್ದು ,ಅದರಿಂದ ಸದರಿ ಕಮೀಷನ ಕಾರ್ಯ ಸರಿ ಆಗಿರುವುದಿಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ. ಕಾನೂನಿನ ಪ್ರಕಾರ ಕಾಣಿಸಿದ ಗಡಿಗುರುತಿನಿಂದ ಅಳತೆಯನ್ನು ಮಾಡಿದ್ದು , ಅತಿಕ್ರಮಣ ಕಂಡು ಬಂದಿದ್ದು , ಅದನ್ನು ನಾವು ತೆರವುಗೊಳಿಸಲು ಬಾಧ್ಯಸ್ಥರಿರುತ್ತೇವೆಂದರೆ ಸರಿಯಲ್ಲ. ಸದರಿ ಕೌಂಟರಕ್ಲೇಮ ಆಸ್ತಿಯನ್ನು ಕಬಳಿಸುವ ಸಲುವಾಗಿ ಹೊಸದಾಗಿ ಪಾಗಾರ ಮತ್ತು ಪಂಪಸೆಟ್ ಅಳವಡಿಸಿರುತ್ತೇವೆಂದರೆ ಸರಿಯಲ್ಲ. ಪ್ರತಿವಾದಿಯರ ಮಾರಾಟಗಾರರು ಮಾರಾಟ ಮಾಡುವ ಸಮಯದಲ್ಲಿ ಇದ್ದ ನಾಲ್ಕು ತೆಂಗಿನ ಮರಗಳನ್ನು ನಾವು ಅತಿಕ್ರಮಣ ಮಾಡಿರುತ್ತೇವೆಂದರೆ ಸರಿಯಲ್ಲ. ಸದರಿ ಅತಿಕ್ರಮಣ ಮಾಡಿದ ಜಾಗವನ್ನು ತೆರವುಗೊಳಿಸಲು ಹಾಗೂ ಅದರಲ್ಲಿದ್ದ ಕಟ್ಟಡವನ್ನು ಸಹ ತೆರವುಗೊಳಿಸಲು ನಾವು ಬಾದಸ್ಥರಿರುತ್ತೇವೆಂದರೆ ಸರಿಯಲ್ಲ. ವಿನಾಃಕಾರಣ ನಾವು ದಾವೆಯನ್ನು ಹೂಡಿದ್ದು ನಮ್ಮ ದಾವೆ ಕಿತ್ತುಹಾಕಬೇಕಾಗುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: – ಇಲ್ಲ –**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಕಾರವಾರ**

ಓ.ಎಸ್ ನಂ. 21/2021

ಪಿ. ಡಬ್ಲ್ಯೂ: 1